# Call on Prime Minister by the Rt Hon Alok Sharma MP, COP26 President-designate

February 16, 2021

## ಸಿಒಪಿ 26 ಅಧ್ಯಕ್ಷ-ನಿಯೋಜಿತ ರೈಟ್ ಹಾನರರಿ ಅಲೋಕ್ ಶರ್ಮಾ ಸಂಸದರಿಂದ ಪ್ರಧಾನ ಮಂತ್ರಿಯವರಿಗೆ ಕರೆ

ಫೆಬ್ರವರಿ 16, 2021

26ನೇ ಯುಎನ್ ಹವಾಮಾನ ಬದಲಾವಣೆ ಸಮ್ಮೇಳನದ (ಸಿಒಪಿ 26) ಅಧ್ಯಕ್ಷ-ನಿಯೋಜಿತ ರೈಟ್ ಹಾನರರಿ ಅಲೋಕ್ ಶರ್ಮಾ ಸಂಸದರು ಇಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ಕರೆ ಮಾಡಿದರು. ಹವಾಮಾನ ಬದಲಾವಣೆಯ ಕುರಿತ ವಿಶ್ವಸಂಸ್ಥೆಯ ಫ್ರೇಮ್‌ವರ್ಕ್ ಕನ್ವೆನ್ಷನ್ (ಯುಎನ್‌ಎಫ್‌ಸಿಸಿಸಿ) ನ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯನ್ನು ಸಿಒಪಿ ಉಲ್ಲೇಖಿಸುತ್ತದೆ, ಇದರ 26ನೇ ಅಧಿವೇಶನವು ಯುಕೆ ನವೆಂಬರ್ 2021 ರಲ್ಲಿ ಗ್ಲಾಸ್ಗೋದಲ್ಲಿ ಆಯೋಜಿಸಲಿದೆ.

ಪ್ರಧಾನ ಮಂತ್ರಿ ಮತ್ತು ಶ್ರೀ ಅಲೋಕ್ ಶರ್ಮಾ ರವರು ಸಿಒಪಿ26 ವರೆಗಿನ ಹವಾಮಾನ ಬದಲಾವಣೆಯ ವಿಷಯಗಳ ಕುರಿತು ಭಾರತ-ಯುಕೆ ಸಹಯೋಗದ ಬಗ್ಗೆ ಚರ್ಚಿಸಿದರು. ಪ್ಯಾರಿಸ್ ಒಪ್ಪಂದಕ್ಕೆ ಭಾರತದ ಬದ್ಧತೆಯನ್ನು ಪ್ರಧಾನ ಮಂತ್ರಿಯವರು ಪುನರುಚ್ಚರಿಸಿದರು ಹಾಗೂ ಸಿಒಪಿ26 ರಲ್ಲಿ ಯಶಸ್ವಿ ಫಲಿತಾಂಶಕ್ಕಾಗಿ ರಚನಾತ್ಮಕವಾಗಿ ಕೆಲಸ ಮಾಡುತ್ತಾರೆ. ಶ್ರೀ ಶರ್ಮಾ ರವರು ಡಿಸೆಂಬರ್, 2020 ರಲ್ಲಿ ನಡೆದ ಹವಾಮಾನ ಮಹತ್ವಾಕಾಂಕ್ಷೆಯ ಸಭೆಯಲ್ಲಿ ಪ್ರಧಾನಮಂತ್ರಿಯವರ ಭಾಷಣವನ್ನು ಉತ್ಸಾಹದಿಂದ ನೆನಪಿಸಿಕೊಂಡರು

ಭಾರತ-ಯುಕೆ ಸಂಬಂಧಗಳನ್ನು ಇನ್ನಷ್ಟು ಬಲಪಡಿಸಲು ಯುನೈಟೆಡ್ ಕಿಂಗ್‌ಡಂನ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ರವರೊಂದಿಗೆ ಕೆಲಸ ಮಾಡುವ ಭರವಸೆಯನ್ನು ಪ್ರಧಾನ ಮಂತ್ರಿಯವರು ವ್ಯಕ್ತಪಡಿಸಿದರು.

**ನವ ದೆಹಲಿ**

**ಫೆಬ್ರವರಿ 16, 2021**

DISCLAIMER: This is an approximate translation. The original is available in English on MEA’s website and may be referred to as the official press release.